ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ॥ 6, ಸ್ರ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವನ್ಮೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫ್.

ಸ್ರ್ 1884ನೇ ಇಸವಿ ಅಗಟೋಬರ್ 3ನೇ ಮುಕ್ತಂ ರೂಲ್ ಆಫ್ ಪ್ರಾಕ್ಟೀಸ್ ನಂಬರ್ 36.

ಸ್ರ್ 1878ನೇ ಇಸವಿ ಮೇ 31ನೇ ಮುಕ್ತಂ 4ನೇ ನಂಬರ್ ರೂಲ್ ಆಫ್ ಪ್ರಾಕ್ಟೀಸ್‌ನಿಂದ ವಿಧಾಯಕವಾಗಿರುವ ಕ್ವಾರ್ಟರ್‌ಲಿ 2ನೇ ನಂಬರು ಸ್ಟೇಟ್‌ಮೆಂಟ್ ಯಾನೆ ಲಿಕ್ಕದ 8, 9, ಮತ್ತು 10ನೇ ಕಲಂಗಳನ್ನ ಈ ಕೆಳಗೆ ತೋರಿಸಿ ಯಿರುವಮೇರೆ ಬದಲಾಯಿಸಲೇಕೆಂದು ಚೀಫ್ ಕೋರ್ಟ್‌ನವರು ಹುಕುಂಮಾಡುತ್ತಾರೆ:—

8		9		10	
ದರಿಯಾಫ್ತಿಯಿಲ್ಲದೆ ಡಿಸ್‌ಛಾರ್ಜ್ ಯಾನೆ ಬಿಡಲ್ಪಟ್ಟವರು.		ಅಕ್ವಿಟೆ. ಯಾನೆ ಖುಲಾಸೆ ಆದವರು.		ಶಿಕ್ಷಿಸಲ್ಪಟ್ಟವರು.	
ಪೊಲೀಸ್ ಸಿಬ್ಬಂದಿಯಲ್ಲದ ಇತರ ಸೇವಕರಲ್ಲಿ	ಇತರ ಸೇವಕರಲ್ಲಿ	ಪೊಲೀಸ್ ಸಿಬ್ಬಂದಿಯಲ್ಲಿ	ಯಿತರ ಸೇವಕರಲ್ಲಿ	ಪೊಲೀಸ್ ಸಿಬ್ಬಂದಿಯಲ್ಲಿ	ಯಿತರ ಸೇವಕರಲ್ಲಿ
8	9	10	11	12	13

ಜುಮ್ಲಾ 28 ಕಲಂಗಳು ಆಗುವದು.

ಕ್ರಿಮಿನಲ್ ತರಫ್.

ಸ್ರ್ 1884ನೇ ಇಸವಿ ಅಗಟೋಬರ್ 20ನೇ ವುಕ್ತುಂ ರೂಲ್ ಆಫ್ ಪ್ರಾಕ್ಟಿಸ್ ನಂಬರ್ 37.

ಸ್ರ್ 1878ನೇ ಇಸವಿ ಜೂನ್ 19ನೇ ವುಕ್ತುಂ 6ನೇ ನಂಬರ್ ರೂಲ್ ಆಫ್ ಪ್ರಾಕ್ಟಿಸ್‌ನಲ್ಲಿ ವಿಧಾಯಕವಾಗಿರುವ 12ನೇ ನಂಬರ್ ಫಾರಂ ಯಾನೆ ನಮೂನೆಗೆ ಬದಲಾಗಿ ಯಿದಕ್ಕೆ ಜಂಟಿಸಿ ಯಿರುವ ಮೊದಲ್ ಸಜಾ ಅದವನನ್ನೇಲೆ ತಯಾರ್ಮಾಡತಕ್ಕ ಛಾರ್ಜಿನ ಫಾರಂ ಯಾನೇ ನಮೂನೆಯನ್ನ ವುಪಯೋಗಿಸಬೇಕೆಂದು ಗವರ್ನ್‌ಮೆಂಟ್‌ನವರ ಅಪ್ಪಣೇಮೇರೆ ಚೀಫ್ ಕೋರ್ಟ್‌ನವರು ಹುಕುಂ ಮಾಡುತ್ತಾರೆ.

ಮೊದಲು ಸಜಾಆದವನ ಮೇಲೆ ತಯಾರ್ಮಾಡತಕ್ಕ ಛಾರ್ಜ್.
ಕ್ರಿಮಿನಲ್ ಫಾರಂ ನಂ. 12.

ಕೋರ್ಟ್‌ನಲ್ಲಿ.

ಫಿರ್ಯಾದಿ

ಅಪರಾಧಿ

ನಾನು ನಿನ್ನ ಮೇಲೆ ಈ ಮೂಲಕ ಈ ಕೆಳಗೆ ನಮೂದಾಗುವವೇರೆ ಛಾರ್ಜ್ ಮಾಡುತ್ತೇನೆ.

ನೀನು ನೇ ತಾರೀಖಿನಲ್ಲಿ ಅಥವಾ ಆಕಾಲದಲ್ಲಿ ಸ್ಥಳದಲ್ಲಿ ಕಳವುಮಾಡಿ ತನ್ಮೂಲಕ ಇಂಡಿಯ್ ಪೆನಲ್ ಕೋಡ್ 379ನೇ ಸೆಕ್ಷನ್ ರೀತ್ಯ ಶಿಕ್ಷೆ ಆಗುವ ಮತ್ತು ಸೆಷನ್ಸ್‌ಕೋರ್ಟ್‌ನವರ ಯಖ್ತ್ಯಾರಿಗೆ ವಳಪಟ್ಟ ತಕ್ಕೀರು ನಡಿಸಿಯಿರುತ್ತೀಯೆ.

ಮತ್ತು ಮೇಲೆ ನಮೂದಾಗುವ ಯೆಂಬ ನಿನ್ನ ಮೇಲೆ ಸದರೀ ಕೃತ್ಯ ನಡಿಸುವದಕ್ಕೆ ಮುಂಚೆ ಅಂದರೆ ನೇ ತಾರೀಖಿನಲ್ಲಿ ಇಂಡಿಯ್ ಪೆನಲ್ ಕೋಡ್ 17ನೇ ಚಾಪ್ಟರ್‌ಮೇರೆ ಶಿಕ್ಷಾರ್ಹವಾದ ತಕ್ಕೀರು ನಾಬೀತಾಗಿ ಸದರೀ ತಕ್ಕೀರು ಅಂದರೆ ಗಾಗಿ ವರುಷ ಸಜ ಯವರಿಂದ ಸ್ಥಳದಲ್ಲಿ ಮೊಕರರು ಆಗಿದ್ದು ಸದರೀ ಸಜಾ ಅದ್ಯಾಪಿ ಸಂಪೂರ್ಣ ಜಾರಿಯಲ್ಲಿರುವದರಿಂದ ಇಂಡಿಯ್ ಪೆನಲ್ ಕೋಡ್ 75ನೇ ಸೆಕ್ಷನ್‌ಮೇರೆ ಜಾಸ್ತೀ ಸಜಾಕ್ಕೆ ನೀನು ಗುರಿಯಾಗಿರುತ್ತೀಯೆ.

ನೀನು ವಿಚಾರಣೆ ಮಾಡಲ್ಪಡಬೇಕೆಂದು ನಾನು ಈ ಮೂಲಕ ಆಜ್ಞೆ ಮಾಡುತ್ತೇನೆ.

ಹುಕುಂ ಬಮೋಜೇಬ್,
ಎನ್. ಹೇಮಾಜಿರಾವ್,
ರಿಜಿಸ್ಟ್ರಾರ್.

ಫಿನ್ಯಾಫಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಸ್‌ಚೇನ್ಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಸ್‌ಚೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.